152ನೇ ನಿ=72=(55) L/KK 0309

# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ಸೂಚನೆ:-** ಗೃಹ ಇಲಾಖೆಯಲ್ಲಿ ಸಹಾಯಕ ಸಬ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್, ಡಿವೈ.ಎಸ್.ಪಿ. ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಸಾಂದರ್ಭಿಕ ರಜೆ (ಸಿ.ಎಲ್.) ಪಡೆಯಲು ಅವಕಾಶವಿದ್ದರೂ, ಹಲವು ಕಾರಣಗಳಿಂದ ಮೇಲಾಧಿಕಾರಿಗಳು ಮೌಖಿಕವಾಗಿ ರಜೆ ಮಂಜೂರು ಮಾಡುತ್ತಿಲ್ಲ. ಇದರಿಂದಾಗಿ ಸದರಿಯವರು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿರುವುದು ಹಾಗೂ ಕಾರ್ಯ ಕ್ಷಮತೆಯಲ್ಲಿ ಕೊರತೆ ಉಂಟಾಗುತ್ತಿದೆ. ಪೊಲೀಸರಿಗೆ ನೀಡುತ್ತಿರುವಂತೆ ವಾರದ ರಜೆಯನ್ನು (ವೀಕ್ಲಿ ಆಫ್) ಕಡ್ಡಾಯವಾಗಿ ಸಹಾಯಕ ಸಬ್ ಇನ್ಸ್‌ಪೆಕ್ಟರ್‌ಯಿಂದ ಡಿವೈ.ಎಸ್.ಪಿ. ವರೆಗಿನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವವರಿಗೆ ನೀಡುವ ಕುರಿತಾದ ಗಂಭೀರ ಸಮಸ್ಯೆ ಕುರಿತು.

**ಉತ್ತರ:-** ಪೊಲೀಸ್ ಇಲಾಖೆಯ ಪಿಸಿ ಮತ್ತು ಹೆಚ್‌ಸಿ ವೃಂದದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ವಾರದ ರಜೆ ಅಥವಾ ವಾರದ ರಜಾ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ.

ಪಿಸಿ ಮತ್ತು ಹೆಚ್.ಸಿ. ವೃಂದಗಳಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ವಾರದ ರಜೆಯನ್ನು ಮಂಜೂರು ಮಾಡಿದ ಸಂದರ್ಭದಲ್ಲಿ ಬದಲಿಯಾಗಿ ಇತರೆ ಸಿಬ್ಬಂದಿಗಳನ್ನು ನಿಯೋಜಿಸಬಹುದಾಗಿದೆ. ಘೋರವಲ್ಲದ (Non-Henious) ಅಪರಾಧ ಪ್ರಕರಣಗಳಲ್ಲಿ ಎ.ಎಸ್.ಐ. ದರ್ಜೆಯ ಅಧಿಕಾರಿಗಳು ತನಿಖೆ ಕೈಗೊಳ್ಳುತ್ತಲಿದ್ದು, ಪಿ.ಎಸ್.ಐ., ಪಿ.ಐ. ವೃಂದದ ಅಧಿಕಾರಿ ಠಾಣಾಧಿಕಾರಿಗಳಾಗಿ ಮತ್ತು ಡಿವೈ.ಎಸ್.ಪಿ. ವೃಂದದ ಅಧಿಕಾರಿಗಳು ಉಪವಿಭಾಗ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಈ ವೃಂದದಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳಿಗೆ ವಾರದ ರಜೆಯನ್ನು ಮಂಜೂರು ಮಾಡಿದಲ್ಲಿ, ಬದಲಿಯಾಗಿ ಇತರೆ ಅಧಿಕಾರಿಗಳನ್ನು ಕರ್ತವ್ಯಕ್ಕೆ ನಿಯೋಜಿಸುವುದು ಕಷ್ಟ ಸಾಧ್ಯವಾಗಿರುತ್ತದೆ. ಆದರೆ ಪ್ರತಿ ವೃಂದದಲ್ಲಿ ಪೊಲೀಸ್ ಅಧಿಕಾರಿಗಳಿಗೆ ಅವರ ಹಕ್ಕಿನಲ್ಲಿರುವ ಸಾಂದರ್ಭಿಕ ರಜೆ, ಗಳಿಕೆ ರಜೆ, ಪರಿವರ್ತಿತ ರಜೆ ಹಾಗೂ ಪತ್ರಾಂಕಿತ ರಜಾ ಅನುಮತಿಯನ್ನು ನಿಯಮಾನುಸಾರ ಮಂಜೂರು ಮಾಡಲಾಗುತ್ತಿದೆ.

**ಸಂಖ್ಯೆ:** ಒಇ 42 ಪಿಇಜಿ 2024

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು